# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

## ಸಿ.ಸಿ. ನಂ. 1685/23

ಸಿ.ಡಬ್ಲ್ಯು 4
ಪಿ.ಡಬ್ಲ್ಯು 3

| | | |
|---|---|---|
| ಸಾಕ್ಷಿದಾರರ ಹೆಸರು | – | ನಾಗರಾಜ ನಾಯಕ |
| ತಂದೆಯ ಹೆಸರು | – | ವೆಂಕಣ್ಣ ನಾಯಕ |
| ವಯಸ್ಸು | – | 52 ವರ್ಷ |
| ಉದ್ಯೋಗ | – | ವಕೀಲರು |
| ವಾಸ್ತವ್ಯ | – | ಕಾರವಾರ |

(ಇಂದು ದಿನಾಂಕಃ 05–08–2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ನನಗೆ ಚಾ.ಸಾ.1 ರವರ ಪರಿಚಯ ಇದೆ. ಆರೋಪಿ ನಂ.1 ಮತ್ತು 2 ರವರ ಪರಿಚಯ ಇದೆ. ದಿನಾಂಕ 21–05–2023 ರಂದು ನನ್ನ ಪರಿಚಯದವರಾದ ಮಂಗಲದಾಸ ಕಾಮತ್ ಇವರ ಮಗನ ಮದುವೆಗೆ ನಾನು ಮತ್ತು ಚಾ.ಸಾ.1 ರವರು ಮತ್ತು ಚಾ.ಸಾ.5 ರವರು ಹೋಗಿದ್ದೆವು. ಸದರಿ ಮದುವೆ ಕಾರವಾರದ ರಾಷ್ಟ್ರೀಯ ಹೆದ್ದಾರಿ ಸಮೀಪದ ಅಜ್ವಿ ಹೋಟೆಲ್‌ನಲ್ಲಿ ನಡೆದಿತ್ತು. ಮದುವೆ ಮುಗಿಸಿ ಮದುವೆಯ ಹಾಲ್‌ನಿಂದ ಹೊರಗಡೆ ಬಂದು ಅಜ್ವಿ ಕಂಪೌಂಡನ್ನು ಸುಮಾರು 12.45 ಗಂಟೆಗೆ ದಾಟುತ್ತಿರುವ ಸಂದರ್ಭದಲ್ಲಿ ಅಜ್ವಿ ಹೋಟಲ್‌ನ ಎದುರುಗಡೆ ಚಾ.ಸಾ.1 ರವರನ್ನು ಆರೋಪಿತರು ಅಡ್ಡಗಟ್ಟಿ ಕಣ್ಣಿನಿಂದ ಗುರಾಯಿಸಿ 1 ನೇ ಆರೋಪಿ ಬೋಳಿಮಗನೇ, ಸೂಳೇಮಗನೇ ವಸಂತ ಗೌಡನಿಗೆ ಸಪೋರ್ಟ ಮಾಡುತ್ತಿಯಾ ಎಂದು ಚಾ.ಸಾ.1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಮುಖದ ಮೇಲೆ, ಬಲಕಣ್ಣಿನ ಮೇಲೆ ಮತ್ತು ತಲೆಯ ಮೇಲೆ 1 ನೇ ಆರೋಪಿ ಕೈಯಿಂದ ಹೊಡೆದರು. ಆಗ 2 ನೇ ಆರೋಪಿ ಚಾ.ಸಾ.1 ರವರನ್ನು ಬಗ್ಗಿಸಿ ತಲೆಯ ಮೇಲೆ ಹಾಗೂ ಕುತ್ತಿಗೆಯ ಮೇಲೆ ಕೈಯಿಂದ

ಹೊಡೆದನು. ಆಗ ಚಾ.ಸಾ.1 ರವರು ನೆಲಕ್ಕೆ ಬಿದ್ದರು. ಇಬ್ಬರೂ ಆರೋಪಿತರು ಚಾ.ಸಾ.1 ರವರನ್ನು ಕಾಲಿನಿಂದ ತುಳಿದಿರುತ್ತಾರೆ. ಅಲ್ಲಿದ್ದ ನಾನು ಮತ್ತು ಚಾ.ಸಾ.5 ರವರು ಸೇರಿ ಚಾ.ಸಾ.1 ರವರನ್ನು ಆರೋಪಿತರು ಹೊಡೆಯುವುದನ್ನು ತಪ್ಪಿಸಿರುತ್ತೇವೆ. ಆಗ 1 ನೇ ಆರೋಪಿ ನಿನ್ನನ್ನು ಮತ್ತು ನಿನ್ನ ಕುಟುಂಬವನ್ನು ಕೊಲೆ ಮಾಡುತ್ತೇನೆ ಎಂದು ಚಾ.ಸಾ.1 ರವರಿಗೆ ಜೀವ ಬೆದರಿಕೆ ಹಾಕಿ ಅಲ್ಲಿಂದ ಹೊರಟು ಹೋಗಿರುತ್ತಾರೆ. ಈ ಬಗ್ಗೆ ಚಾ.ಸಾ.1 ರವರ ಬಳಿ ವಿಚಾರಿಸಿದಾಗ ಈ ಹಿಂದೆ 1 ನೇ ಆರೋಪಿ ವಸಂತ ಗೌಡ ಎನ್ನುವವನ ಮೇಲೆ ಗುಂಡು ಹಾರಿಸಿ ಕ್ರಿಮಿನಲ್ ಪ್ರಕರಣವನ್ನು ಎಸಗಿರುತ್ತಾನೆ, ನಾನು ಆತನಿಗೆ ಬೆಂಬಲಿಸುತ್ತೇನೆ ಎಂದು ತಪ್ಪು ತಿಳಿದು ಈ ರೀತಿ ಹಲ್ಲೆ ಮಾಡಿರುತ್ತಾನೆ ಎಂದು ಹೇಳಿರುತ್ತಾರೆ. ಅವರನ್ನು ಉಪಚರಿಸಿದಾಗ ಅವರ ಮುಖ ಮತ್ತು ಕಣ್ಣಿನ ಬಳಿ ಬಾತಿತ್ತು. ಅವರ ಶರ್ಟ ಮತ್ತು ಬನಿಯನ್ ಹರಿದಿತ್ತು. ನಂತರ ನಾನು ಮತ್ತು ಚಾ.ಸಾ.5 ರವರು ಸೇರಿ ಚಾ.ಸಾ.1 ರವರನ್ನು ಜಿಲ್ಲಾ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಅಲ್ಲಿ ವೈದ್ಯರು ಅವರನ್ನು ಉಚರಿಸಿ ಚಿಕಿತ್ಸೆ ನೀಡಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿ ನನ್ನ ಹೇಳಿಕೆ ನೀಡಿರುತ್ತೇನೆ. ಆ ದಿನ ಚಾ.ಸಾ.1 ರವರಿಗೆ ಹೊಡೆದು ಹಲ್ಲೆ ಮಾಡಿ ಅಡ್ಡಗಟ್ಟಿರುವ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಗೈರು– ಹಾಜರಿದ್ದು ಅವರನ್ನು ಗುರುತಿಸುವಿಕೆಗೆ ತಕರಾರು ಇಲ್ಲವೆಂದು ಆರೋಪಿ ಪರ ವಕೀಲರು ಹೇಳಿರುತ್ತಾರೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು, ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ